ಸಾಧ್ಯವಾಗುತ್ತದೆ. ಮಳೆ ಬಂದಾಗ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಹೇಳತಕ್ಕ ಸ್ಥಿತಿಯಲ್ಲಿಲ್ಲ. ಅಲ್ಲಿ ನಾನು ಹೋದರೆ ಜನರು ಊರಿನ ಒಳಕ್ಕೆ ಬಿಡುವುದಿಲ್ಲ. ಕುಡಿಯಲು ನೀರನ್ನು ಕೊಡದಿರುವ ಶಾಸಕ ಎಂದು ಹೇಳುತ್ತಾರೆ. ಆದ್ದರಿಂದ ದಯವಿಟ್ಟು ಈ ಗಂಭೀರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ತುಂಬೆ ಡ್ಯಾಂನ ನೀರು ಅವರು ಕುಡಿಯಲು ಸಿಗುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಮೀನುಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಿರ್ವಸಿತಿಕರಿಗೆ ಆಗಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಅವರು ಸಲಹೆಯನ್ನೂ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ಅತಿ ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

ಓ) ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರ ಹೋಬಳಿಯ ಕುಕ್ಕಾಹೊಳೆ ಹೂಳು ಎತ್ತದೆ ಹಾಗೆಯೇ ಬಿಟ್ಟಿರುವುದು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಅಧ್ಯಕ್ಷರೆ, ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರ ಹೋಬಳಿಯ ಕಕ್ಕೆ ಹೊಳೆ ಎಂಬ ಹೊಳೆಗೆ ಸಂಬಂಧಪಟ್ಟ ನಾಲೆ ಕಳೆದ ಎರಡು ವರ್ಷದಿಂದ ಕೆಸರು ತುಂಬಿ ಹೂಳು ಎತ್ತದೆ ಹಾಗೆಯೇ ಬಿಟ್ಟಿರುವುದರಿಂದ ಸುಮಾರು ಐದುನೂರು ಎಕರೆ ಜಮೀನಿಗೆ ನೀರಿಲ್ಲದೆ ರೈತರು ತೊಂದರೆ ಪಡುತ್ತಿದ್ದಾರೆ. ಹಾಗೆಯೇ ಸೋಮವಾರಪೇಟೆಯ ಐಗೂರು ಪಂಚಾಯಿತಿಗೆ ಸಂಬಂಧಪಟ್ಟಂತೆ ಕಾಜೂರು ಹೊಳೆಯಲ್ಲಿ ಕೂಡ ಹೂಳು ಎತ್ತದೆ ರೈತರಿಗೆ ಬಹಳ ತೊಂದರೆಯಾಗಿದೆ. ಬೆಳೆ ನಾಶವಾಗಿದೆ. ಆದ್ದರಿಂದ ಈ ವರ್ಷವಾದರೂ ಆ ಕೆರೆಗಳ ಹೂಳನ್ನು ಎತ್ತಿ ರೈತರ ಬೆಳೆಗೆ ಸಹಾಯ ಮಾಡಿಕೊಡಬೇಕಾಗಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಸಚಿವರಿಗೆ ಇದರ ಬಗ್ಗೆ ತಿಳಿಸಿ ಸೂಕ್ತ ಕ್ರಮ ತೆಗೆದಕೊಳ್ಳಲು ವ್ಯವಸ್ಥೆ ಮಾಡುತ್ತೇನೆ.

ಕ) ಮಂಗಳೂರಿನಲ್ಲಿ ಕನ್ನಡ ಅಕಾಡಮಿ ಪ್ರಶಸ್ತಿ ಪ್ರಧಾನ ಸಮಾರಂಭ ಮತ್ತು ಪುಸ್ತಕ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಾರದೇ ಇರುವುದು.

ಶ್ರೀ ಎನ್.ಯೋಗೇಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ನಿನ್ನೆ ಮಂಗಳೂರಿನಲ್ಲಿ ಪ್ರತಿಷ್ಠಿತವಾಗಿರತಕ್ಕ ಕನ್ನಡ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪ್ರಧಾನ ಸಮಾರಂಭ ಮತ್ತು ಪುಸ್ತಕ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಡಾ: ವಿಜಯ ಸಾಸನೂರ್, ಶ್ರೀ ಸಿಂಗ್ವಿ ಬೋಳಾರ್ ಮಹಮದ್ ಉಪನಿ,

ಡಾ: ಎಂ.ಎಂ.ಕಲಬುರ್ಗಿ ಅಂಥ ಅನೇಕ ಸಾಹಿತಿಗಳು ಅಲ್ಲಿ ಉಪಸ್ಥಿತರಿದ್ದರು. ಇಂಥ ದೊಡ್ಡ ಕಾರ್ಯಕ್ರಮ ಸರ್ಕಾರದ ವತಿಯಿಂದ ನಡೆಯುತ್ತಿರುವ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯರಾದ ಮಾನ್ಯ ಲೀಲಾದೇವಿ ಪ್ರಸಾದ್, ಮಾನ್ಯ ಎಂ.ಪಿ.ಪ್ರಕಾಶ್ ಮತ್ತು ಮಾನ್ಯ ಬಿ.ಎ.ಮೊಹಿದ್ದೀನ್‌ರವರ ಅನುಪಸ್ಥಿತಿ ಅಲ್ಲಿ ಕಾಣುತ್ತಿತ್ತು. ಅವರುಗಳು ಸಮಾರಂಭಕ್ಕೆ ಬರುತ್ತಾರೆ ಎಂದು ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದರೂ ಅವರುಗಳು ಸಮಾರಂಭಕ್ಕೆ ಬರಲು ಸಾಧ್ಯವಾಗಲಿಲ್ಲ. ರಾಜಕೀಯ ಸಭೆಯಿಂದಾಗಿ ಅವರುಗಳು ಆ ಸಮಾರಂಭಕ್ಕೆ ಬರಲು ಸಾಧ್ಯವಾಗಲಿಲ್ಲವೆಂದು ಘೋಷಣೆ ಸಹ ಮಾಡಲಾಯಿತು. ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿರುವ ಅಂಥ ಮಹನೀಯರಿಗೆ ಸನ್ಮಾನ ಮಾಡುವ ಆ ಸಮಾರಂಭಕ್ಕಿಂತ ರಾಜಕೀಯ ಸಭೆ ಅವರುಗಳಿಗೆ ಮುಖ್ಯವಾಗಿತ್ತೆ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಎರಡು ಕೋಟಿ ಹಣದ ಅನುದಾನವನ್ನು ಈ ಸಲ ಕೊಟ್ಟಿಲ್ಲವೆಂಬ ಬೇಸರಕ್ಕೆ ಮಾನ್ಯ ಸಚಿವೆಯರು ಸಮಾರಂಭಕ್ಕೆ ಬರಲಿಲ್ಲವೆ? ಇದರ ಬಗ್ಗೆ ವಿವರಣೆಯನ್ನು ಮಾನ್ಯ ಸಚಿವೆಯರು ಕೊಡಬೇಕಾಗಿ ವಿನಂತಿಸುವೆ. ಅಲ್ಲಿರುವ ಒಂದೊಂದು ಪುಸ್ತಕದ ಬಗ್ಗೆ ಒಬ್ಬ ವ್ಯಕ್ತಿ ಮೂಲಕ ವಿವರಣೆಯನ್ನು ಕೇಳಲು ಆರಂಭವಾಗಿತ್ತು. ಅಲ್ಲಿರುವ ಒಂದು ಪುಸ್ತಕ ಸಚಿವೆಯರು ಏಕೆ ಬಂದಿಲ್ಲವೆಂದು ಕೇಳಿದಂತಿತ್ತು, ಮತ್ತೊಂದು ಪುಸ್ತಕ ಧರ್ಮ ಮತ್ತು ರಾಜಕಾರಣದಿಂದ ಅವರು ಬರಲಾಗಲಿಲ್ಲವೆಂದು ಉತ್ತರ ಕೊಟ್ಟಂತೆ ಇತ್ತು. ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏನಾಗಿದೆ ಎಂಬುದಕ್ಕೆ ಅಲ್ಲಿದ್ದ ಕುಂಭಕರ್ಣ ನಿದ್ರೆ ಎನ್ನತಕ್ಕ ಟೈಟಲ್ ಇರುವ ಪುಸ್ತಕ ಹೇಳಿದಂತಿತ್ತು. ಅಲ್ಲಿರುವ ಮತ್ತೊಂದು ಪುಸ್ತಕ ಸಾಹಿತ್ಯ ಗದ್ದಲ ಎಂದು ಟೈಟಲ್ ಇರುವುದು ಇದಕ್ಕೆ ಪರಿಹಾರವೇನು ಎಂದು ಕೇಳಿದ್ದಕ್ಕೆ ಉತ್ತರ ಕೊಟ್ಟಂತೆ ಇತ್ತು. ಈ ರೀತಿಯ ರಾಜಕೀಯ ವ್ಯವಸ್ಥೆಗೆ ಪರಿಹಾರವೇನು ಎಂದು ಕೇಳಿದ್ದಕ್ಕೆ 'ಅಮೃತ ಬಳ್ಳಿಯ ಕಷಾಯ'ವೆಂದು ಟೈಟಲ್ ಇರುವ ಪುಸ್ತಕ ಉತ್ತರ ಹೇಳಿದಂತಿತ್ತು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂಗವಾಗಿರತಕ್ಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಪ್ರಧಾನ ಸಮಾರಂಭ ಮಂಗಳೂರಿನಲ್ಲಿ ನಡೆಯಿತು. ನನಗೆ, ಹಿರಿಯ ಸಚಿವರಾದ ಎಂ.ಪಿ.ಪ್ರಕಾಶ್ ಮತ್ತು ಮೊಹಿದ್ದೀನ್‌ರವರಿಗೆ ಅದು ಗೊತ್ತಿತ್ತು. ಕಾರ್ಯಕ್ರಮಕ್ಕೆ ಹೋಗಬೇಕೆಂದು ನಾವುಗಳೆಲ್ಲರೂ ಸಿದ್ಧರಾಗಿದ್ದೆವು. ಆದರೆ ಅಂದೇ ಪಾರ್ಲಿಮೆಂಟರಿ ಬೋರ್ಡ್‌ನ ಮುಖ್ಯವಾದ ಸಭೆ ಇದ್ದದ್ದರಿಂದ ನಾವುಗಳು ಅಲ್ಲಿಗೆ ಅಗತ್ಯವಾಗಿ ಹೋಗಬೇಕಾಗಿದ್ದರಿಂದ ಆ ಸಮಾರಂಭಕ್ಕೆ ಅನಿವಾರ್ಯ ಕಾರಣದಿಂದ ಹೋಗಲು ಆಗಲಿಲ್ಲ. ಅದನ್ನು ಬಿಟ್ಟರೆ ಬೇಜಾರಾಗಲಿ, ಮತ್ತೊಂದಾಗಲಿ ಯಾವುದೇ ಕಾರಣದಿಂದ ಹೋಗಲಿಲ್ಲವೆಂದಲ್ಲ. ಆದರೆ ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ಬಹಳ ಗೌರವಾನ್ವಿತರಾದಂಥ ಡಾ: ಎಂ.ಎಂ.ಕಲ್ಬುರ್ಗಿಯವರು

ಒಪ್ಪಿಕೊಂಡು ಬಂದಿದ್ದಾರೆ. ಬಹಳ ದೊಡ್ಡ ಸಾಹಿತಿಗಳು, ಶಾಸಕರಾದ ಯೋಗೇಶ್‌ಭಟ್‌ರವರೂ ಅಲ್ಲೇ ಇದ್ದಾರೆ. ದೇವಣ್‌ಶೆಟ್ಟಿಯವರೂ ಅಲ್ಲೇ ಇದ್ದಾರೆ, ನಾವು ಅನಿವಾರ್ಯದಿಂದ ಆ ಸಮಾರಂಭಕ್ಕೆ ಹೋಗಲು ಆಗಲಿಲ್ಲವೇ ಹೊರತು ಮತ್ತಾವುದೇ ಕಾರಣದಿಂದ ಹೋಗಲಿಲ್ಲವೆಂದಲ್ಲ.

ಶ್ರೀ ಯು.ಆರ್.ಸಭಾಪತಿ: ಬಹಳ ಗಂಭೀರವಾದ ಪ್ರಶ್ನೆ, ಸರ್ಕಾರಿ ಕಾರ್ಯಕ್ರಮ ಸಾಹಿತ್ಯಕ್ಕೆ ಮಹತ್ವ ಕೊಡುವ ಇಲಾಖೆ ಇವರದ್ದು, ಇವರಿಗೆ ಇದಕ್ಕಿಂತ ಮುಖ್ಯವಾದ ಸಭೆ ಪಾರ್ಲಿಮೆಂಟರಿ ಬೋರ್ಡ್‌ನ ಸಭೆಯಾದರೆ ಇದು ಇವರಿಗೆ ನಾಚಿಕೆಗೇಡಿನ ವಿಚಾರವೆಂದು ಹೇಳಬೇಕಾಗುತ್ತದೆ.

ಶ್ರೀ ಯು.ಆರ್.ಸಭಾಪತಿ: ಮೂರು ಮಂದಿ ಸಚಿವರಲ್ಲಿ ಒಬ್ಬರಾದರೂ ಬಂದಿದ್ದರೆ ಪರವಾಗಿರಲಿಲ್ಲ. ಇದು ನಾಚಿಕೆಗೇಡಿನ ವಿಚಾರ, ಇದು ಸರಿ ಕಾಣುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಇದು ಬಹಳ ಪ್ರಮುಖವಾದ ಸಮಾರಂಭವೆಂದು ನನಗೆ ಅರ್ಥವಾಗುತ್ತದೆ. ಆದರೆ ಅನಿವಾರ್ಯದಿಂದ ನಾನು ಪಾರ್ಲಿಮೆಂಟರಿ ಬೋರ್ಡ್ ಸಭೆಗೆ ಹೋಗಬೇಕಾಗಿದ್ದರಿಂದ ಆ ಸಮಾರಂಭಕ್ಕೆ ಬರಲು ಸಾಧ್ಯವಾಗಲಿಲ್ಲ. ತಾವು ನನಗೆ ಇದರ ಬಗ್ಗೆ ಪಾಠ ಹೇಳಿಕೊಡಬೇಕಾಗಿಲ್ಲ. ನಾನು ಯಾವ ಸಭೆಗೂ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ಅನಿವಾರ್ಯದಿಂದ ಹೋಗದಿರಬಹುದು ಅಷ್ಟೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಸಾಹಿತಿಗಳ ಬಗ್ಗೆ ಸರ್ಕಾರಕ್ಕೆ ಬಹಳ ಗೌರವವಿದೆ. ನಾವೆಲ್ಲರೂ ರಾಜಕೀಯದಲ್ಲಿ ಇರುವುದರಿಂದ, 6ನೇ ತಾರೀಖು ವಿಧಾನಪರಿಷತ್‌ನ ಸದಸ್ಯತ್ವ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು. ಆದ್ದರಿಂದ ಅನಿವಾರ್ಯ ಕಾರಣದಿಂದ ನಾವೆಲ್ಲರೂ ಆ ಪಾರ್ಲಿಮೆಂಟರಿ ಬೋರ್ಡ್‌ನ ಸಭೆಯಲ್ಲಿ ಇರಬೇಕಾಯಿತು. ಆದ್ದರಿಂದ ನಾವು ಆ ಸಮಾರಂಭಕ್ಕೆ ಬರಲು ಆಗಲಿಲ್ಲವೆಂದು ಮೊದಲೇ ತಿಳಿಸಿದ್ದೇವೆ.

1.40 ಪಿ.ಎಂ.

ಗೊಂದಲ

ಶ್ರೀ ಯು.ಆರ್.ಸಭಾಪತಿ: ಅನಿವಾರ್ಯವಾಗಿ ಬರದಿದ್ದರೆ ತಮ್ಮ ಪರವಾಗಿ ಬೇರೊಬ್ಬರನ್ನು ಕಳುಹಿಸಬಹುದಿತ್ತಲ್ಲಾ?

ಅಧ್ಯಕ್ಷರು: ಕೆಲವು ಸಲ ಅನಿವಾರ್ಯವಾಗಿ ಆ ರೀತಿಯಾಗುತ್ತದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್: ತಾವು ದಯಮಾಡಿ ಆ ರೀತಿ ಮಾತನಾಡಬೇಡಿ. ಯಾವುದೇ ಕಾರ್ಯಕ್ರಮಕ್ಕೆ ನಾನು ಒಪ್ಪಿಕೊಂಡ ಮೇಲೆ ತಪ್ಪಿಸುವುದಿಲ್ಲ. ಅನಿವಾರ್ಯದಿಂದ ಅದಕ್ಕೆ ಬರಲು ಆಗಲಿಲ್ಲ. ಅನಿವಾರ್ಯವಾಗಿ ಒಮ್ಮೊಮ್ಮೆ ಆ ರೀತಿಯಾಗುತ್ತದೆ.

ಖ) ಮುರುಡೇಶ್ವರ ಸೀಫುಡ್ ಕಾರ್ಖಾನೆ ಮುಚ್ಚಿರುವುದು.

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಅಧ್ಯಕ್ಷರೆ, ಪ್ರತಿಷ್ಠಿತ ಮುರುಡೇಶ್ವರ ಸೀಫುಡ್ ಕಾರ್ಖಾನೆ ಅನಿವಾರ್ಯ ಕಾರಣಗಳಿಂದ ಕಳೆದ ಮೂರು ವರ್ಷಗಳಿಂದ ಮುಚ್ಚಿದ್ದಾರೆ. ಅಲ್ಲಿನ ಖಾಯಂ ನೌಕರರು ಪರಿಹಾರಕ್ಕಾಗಿ ಹೋರಾಟವನ್ನು ನಡೆಸಿದರು. ಮಾಲೀಕರು ಮತ್ತು ಕಾರ್ಮಿಕರ ನಡುವೆ ಅಧಿಕಾರಿಗಳ ಸಮಕ್ಷಮ ಸಂಧಾನವಾಗಿ, 4.6.1997ರ ಆ ಸಭೆಯಲ್ಲಿ 22 ಲಕ್ಷದ 79 ಸಾವಿರ ಹಣವನ್ನು ಕೊಡಬೇಕೆಂದು ತೀರ್ಮಾನವಾಗಿರುತ್ತದೆ. ಅದರಂತೆ 16-3-98ರಂದು ಬಡ್ಡಿ ಸಮೇತ 22 ಲಕ್ಷದ 79 ಸಾವಿರದ 52 ರೂಪಾಯಿಗಳನ್ನು ಮಾಲೀಕರು, ಬೆಳಗಾಂ ವಿಭಾಗದ ಲೇಬರ್ ಕಮೀಷನ್‌ರವರ ಖಾತೆಗೆ ಜಮಾ ಮಾಡಿದ್ದಾರೆ. ಎರಡೂವರೆ ತಿಂಗಳುಗಳಾದರೂ ಕಾರ್ಮಿಕರಿಗೆ ಹಣ ಸಂದಾಯವಾಗಿಲ್ಲ. ಅಧಿಕಾರಿಗಳು ಮತ್ತು ಕಾರ್ಮಿಕರು ಕೂಡಿ ಇದಕ್ಕೆ 15 ಪರ್‌ಸೆಂಟ್ ಹಣವನ್ನು ಸೇರಿಸಿಕೊಡಬೇಕೆಂದು ದೂರಿದ್ದಾರೆ. ಕೂಡಲೇ ಕಾರ್ಮಿಕರಿಗೆ ಹಣ ಪಾವತಿಯಾಗಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಸತ್ಯನಾರಾಯಣ್ (ಕಾರ್ಮಿಕ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಬೆಳಗಾಂ ವಿಭಾಗದ ಡೆಪ್ಯೂಟಿ ಕಮೀಷನ್‌ರವರಿಂದ ವರದಿಯನ್ನು ತರಿಸಿಕೊಂಡು ಬೇಗನೆ ಹಣವನ್ನು ಪಾವತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಗ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಭಾರಿ ಮಳೆಯಿಂದ ಬೆಳೆ ಹಾನಿಯಾಗಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಇತ್ತೀಚೆಗೆ ಬಹಳ ಗಾಳಿ ಬೀಸಿ, ದೊಡ್ಡ ಪ್ರಮಾಣದಲ್ಲಿ ಆಲಿಕಲ್ಲುಗಳು ಬಿದ್ದು ಸಹಸ್ರಾರು ತೆಂಗಿನ, ಅಡಿಕೆ, ಬಾಳೆ ಮರಗಳು ನಾಶವಾಗಿದೆ. ಬಾಳೆ ಬೆಳೆಗೆ ಬಹಳ ನಾಶವಾಗಿದೆ. ಹೋದ ವರ್ಷ ಇದೇ ಕಾಲದಲ್ಲಿ ನನ್ನ ಕ್ಷೇತ್ರದ ಅಂದನಕೆರೆ ಹೋಬಳಿಯಲ್ಲಿ ಇದೇ ರೀತಿ 2-3 ಸಾವಿರ ತೆಂಗಿನ ಮರಗಳು ನಾಶವಾಗಿ ರೈತರು ಕಂಗಾಲಾಗಿದ್ದರು. ಈ ವರ್ಷ ಸಹ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಘನ ಸರ್ಕಾರದವರು ಇವರಿಗೆ ತಾತ್ಕಾಲಿಕವಾಗಿ ಏನಾದರೂ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕು. ಏತಕ್ಕಾಗಿ ಈ ಭಾಗದಲ್ಲಿ ಈ ರೀತಿಯಾಗುತ್ತದೆ ಎಂಬ ಬಗ್ಗೆ ಅವಲೋಕನ ನಡೆಸಬೇಕು. ಏಪ್ರಿಲ್,